



ಪರಿವರ್ತಿಸುವುದು ಸುಲಭವಲ್ಲ.

## ತಾಳೆ ಎಣ್ಣೆಯ ತುಮುಲ

ಇನ್ನು ತಾಳೆ ಗಿಡಗಳ ಕೃಷಿಗೆ ತೊಡಗುವ ಮುನ್ನ ಒಂದು ಕ್ಷಣ ಆ ಬೆಳೆಯ ಬಗ್ಗೆ ಒಂದಿಷ್ಟು ವಿಚಾರ ಮೂಡಿಸಲು ಈ ಸುದೀರ್ಘ ಪೀಠಿಕೆ. ತಾಳೆ ಎಣ್ಣೆಯು ನಿಜವಾಗಿಯೂ ಸರ್ವಕ್ಷೇತ್ರವ್ಯಾಪಿಯಾಗಿದೆ. ವಾಹನ ಪ್ರಪಂಚದಿಂದ ಹಿಡಿದು ಅಡುಗೆ ಮನೆಯವರೆಗೂ, ಸ್ನಾನದ ಮನೆಯಿಂದ ಹಲವಾರು ಕಾರ್ಖಾನೆಗಳ ವರೆಗೂ ವಿವಿಧ ರೀತಿಯಲ್ಲಿ ಬಳಕೆಯಲ್ಲಿದೆ. ಕೀಲೆಣ್ಣೆ, ಜೈವಿಕ ಇಂಧನ, ಅಡುಗೆ ಎಣ್ಣೆ, ಸ್ನಾನಕ್ಕೆ ಬಳಸುವ ಸೋಪಿನ ತಯಾರಿ, ಆಹಾರ ಉತ್ಪನ್ನಗಳ ತಯಾರಿಗೆ ಹೀಗೆ ಹಲವಾರು ರೀತಿಯಲ್ಲಿ ಔದ್ಯಮಿಕ ಮಟ್ಟದಲ್ಲಿ ಅಪಾರ ಜನಪ್ರಿಯ ವಾಗಿದೆ. ಇದಕ್ಕೆಲ್ಲಾ ಮೂಲ ಕಾರಣ ಅದರ ಕಡಿಮೆ ಬೆಲೆ. ಯಾವುದೇ ಸಸ್ಯಜನ್ಯ ಎಣ್ಣೆಗೆ ಹೋಲಿಸಿದರೆ ತಾಳೆ ಎಣ್ಣೆಯ ಬೆಲೆ ತೀರಾ ಕಡಿಮೆ. ಆದ ಕಾರಣವೇ ಇದು ಉದ್ಯಮಿಗಳ ನೆಚ್ಚಿನ ಕಚ್ಚಾವಸ್ತು. ಯಾವ ಉತ್ಪನ್ನಗಳಲ್ಲಿ ಎಣ್ಣೆಯ ಬಳಕೆಯಿದೆಯೋ ಅಂತಹ ಉತ್ಪನ್ನಗಳನ್ನು ತಯಾರಿಸುವ ಉದ್ದಿಮೆಗಳ ಮೊದಲ ಆಯ್ಕೆ ತಾಳೆ ಎಣ್ಣೆ.

ತಾಳೆಯನ್ನು ಮೈಲುಗಟ್ಟಲೇ ಜಾಗದಲ್ಲಿ ಬೆಳೆಯುವುದು ಆಗ್ನೇಯ ಏಷ್ಯಾದ ದೇಶಗಳಾದ ಇಂಡೋನೇಷ್ಯಾ, ಮಲೇಷ್ಯಾ, ಕಾಂಬೋಡಿಯಾ, ಥಾಯ್ಲೆಂಡ್‌ಗಳಲ್ಲಿ. ಆಫ್ರಿಕಾ ಮತ್ತು ದಕ್ಷಿಣ ಅಮೆರಿಕ ಅಮೆಝಾನ್ ನಿತ್ಯ ಹರಿದ್ವರ್ಣ ಕಾಡುಗಳ ಪ್ರಾಂತ್ಯದಲ್ಲಿಯೂ ಇದು ದೊಡ್ಡ ಕೃಷಿ. ತಾಳೆಯನ್ನು ಬೆಳೆಸಲು ಮೈಲುಗಟ್ಟಲೇ ಜಾಗದಲ್ಲಿನ, ನೈಸರ್ಗಿಕವಾಗಿ ಯಾರ ಹಂಗೂ ಇಲ್ಲದೇ ಬೆಳೆದ ಅಸಂಖ್ಯಾತ ಗಿಡ ಮರಗಳ ಮಾರಣಹೋಮವೇ ಆಗುತ್ತಿದೆ. ಇದನ್ನು ಅನಧಿಕೃತ ಉತ್ಪಾದನೆ ಎಂದೇ ಕರೆಯಲಾಗುತ್ತಿದೆ. ಅಂತಹ ದಟ್ಟ ಕಾಡುಗಳಲ್ಲಿ ರಾಜಾರೋಷವಾಗಿ ಹೆದ್ದಾರಿ ನಿರ್ಮಿಸಿ, ದೈತ್ಯಾಕಾರದ ಮರ ಕತ್ತರಿಸುವ, ಉರುಳಿಸುವ, ಬುಡವನ್ನೆಬ್ಬಿಸುವ, ಮಣ್ಣನ್ನು ಬಗೆಯುವ ಸಾವಿರಾರು ಯಂತ್ರಗಳು ಬೊಬ್ಬಿರಿಯುತ್ತಿವೆ. ಗೋರಿಲ್ಲಾ, ಚಿಂಪಾಂಜಿ, ಒರಾಂಗುಟಾನ್‌ನಂತಹ ಮಾನವನ ಹತ್ತಿರದ ಸಂಬಂಧಿಗಳು ತಮ್ಮದಾದ ಮೂಲನೆಲೆಯನ್ನೇ ಕಳೆದುಕೊಂಡು ಅಮೂಲಾಗ್ರ ನಿರ್ನಾಮವಾಗುತ್ತಿವೆ. 'ಗ್ರೀನ್‌ಪೀಸ್' ಮೊದಲಾದ ಸ್ವಯಂಸೇವಾ ಸಂಸ್ಥೆಗಳ ಸಾವಿರಾರು ಕಾರ್ಯಕರ್ತರು ಹೀಗೆ ನಿರ್ಗತಿಕರಾದ ಜೀವಿಗಳ ಪುನರ್ವಸತಿಗೆ ಒಂದೇ ಸಮನೆ ಶ್ರಮಿಸುತ್ತಿದ್ದರೂ ಸಾಧ್ಯವಾಗುತ್ತಿಲ್ಲ.

ಪ್ರಕೃತಿಯ ಈ ಅನಿರ್ಬಂಧಿತ ಲೂಟಿ ಆಯಾ ಪ್ರಾಂತ್ಯದ ಸರ್ಕಾರಗಳಿಗೆ ಗೊತ್ತಿದ್ದರೂ ಕೂಡ ಬಲಿಷ್ಠರ ಲಾಬಿಯಿಂದಾಗಿ ಕೈಕಟ್ಟಿ ಕುಳಿತಿವೆ. ಇನ್ನು ಕೆಲವು ಪ್ರಾಂತ್ಯದಲ್ಲಿ ಲೂಟಿ ಹೇಗಾಗುತ್ತಿದೆ ಎಂದರೆ ಹಲವಾರು ಮೈಲು ವಿಸ್ತಾರದ ಕಾಡಿಗೆ ಕಾಡೇ ಸದಾಕಾಲವೂ ಹೊತ್ತಿ ಉರಿಯುತ್ತದೆ. ಈ ರೀತಿ ಕಾಡನ್ನು ಉರಿಸುವ ಕ್ರಿಯೆಯಲ್ಲಿ ಬಿಡುಗಡೆಯಾಗುವ ಕಾರ್ಬನ್ ಡೈ ಆಕ್ಸೈಡ್‌ನ ಪ್ರಮಾಣವೆಷ್ಟಿದ್ದೀತು? ಅದರಲ್ಲೂ ಮಳೆಕಾಡುಗಳು ಸಾಮಾನ್ಯ ಕಾಡುಗಳಿಗಿಂತ ಹೆಚ್ಚಿನ ಇಂಗಾಲವನ್ನು ತಮ್ಮಲ್ಲಿ ಹಿಡಿದಿಟ್ಟುಕೊಂಡಿರುತ್ತವೆ. ಸಹಜವಾಗಿಯೇ ಹೊತ್ತಿ ಉರಿಯುವಾಗ ಬಿಡುಗಡೆಯಾಗುವ ವಿಷಕಾರಿ ಅನಿಲಗಳ ಪ್ರಮಾಣ ಸಾಮಾನ್ಯ ಕಾಡಿಗಿಂತ ಅಧಿಕವಾಗಿಯೇ ಇರುತ್ತದೆ. ಹತ್ತಿರದ ಹಳ್ಳಿಪಟ್ಟಣಗಳ ಜನರೂ ಕೂಡ ಹೊರಸೂಸುವ ಹೊಗೆಯಿಂದ ನಲುಗುತ್ತಾ ಹಲವಾರು ಶ್ವಾಸ ಸಂಬಂಧೀ ರೋಗಗಳಿಂದ ನರಳುತ್ತಿದ್ದಾರೆ.

ಇತ್ತೀಚೆಗೆ ಜಾಗೃತಗೊಂಡ ಸ್ಥಳೀಯ ನಿವಾಸಿಗಳ ಬೆದರಿಕೆಗೋ, ಚಳುವಳಿಗೋ, ಆಂದೋಲನಕ್ಕೆ ಬೆದರಿ ಎಷ್ಟೋ ಕಂಪೆನಿಗಳವರು ಈ ರೀತಿ ಅನಧಿಕೃತವಾಗಿ ಬೆಳೆದ ತಾಳೆ ಎಣ್ಣೆಯನ್ನು ತಮ್ಮ ಉತ್ಪನ್ನಗಳಲ್ಲಿ ಬಳಸುವುದಿಲ್ಲವೆಂದು ಬಹಿರಂಗವಾಗಿ ಪ್ರತಿಜ್ಞೆ ಮಾಡಿವೆ. ಆದರೆ ಅಂತರಂಗದಲ್ಲಿನ ಬೆಳವಣಿಗೆಗಳನ್ನು ತೋರುವವರಾರು? ತೀರಾ ಕಡಿಮೆಗೆ ಸಿಗುವುದರಿಂದ ಯಾರು ತಾನೇ ಬಿಡುತ್ತಾರೆ? ನಮ್ಮ ದೇಶದ ಸರ್ಕಾರಗಳೂ ಕೂಡ ಪಡಿತರ ವಿತರಣೆಗೆ ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿಲ್ಲವೇ? ಅಂತಹ ಎಣ್ಣೆಯ ಮೂಲ ಅಧಿಕೃತವೋ... ಅನಧಿಕೃತವೋ ಬಲ್ಲವರಾರು? ನಾವು ಮಾರುಕಟ್ಟೆಗೆ ಹೋದಾಗ ಯಾವ ಎಣ್ಣೆ ಕಡಿಮೆ ದರದಲ್ಲಿ ಸಿಗುತ್ತದೆ ಎಂದು ನೋಡಿ ತಾಳೆ ಎಣ್ಣೆಯನ್ನು ಮನೆಗೆ ಕೊಂಡೊಯ್ಯುತ್ತಿರುವುದು ಸುಳ್ಳೇ?

ಇದು ಜಾಗತಿಕವಾಗಿ ತಾಳೆ ಎಣ್ಣೆಯ ಸ್ಥೂಲ ಚಿತ್ರಣ. ಇನ್ನು ರಬ್ಬರಿನಂತೆ ಇಲ್ಲಿಯೂ ಜೀವವೈವಿಧ್ಯಕ್ಕೆ ಧಕ್ಕೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ತನ್ಮೂಲಕ ಪರಿಸರದ ಹಲವಾರು ಅವಘಡಗಳಿಗೆ ನಾವು ಕಾರಣರಾಗುತ್ತೇವೆ. ಆದಕಾರಣ ಕೃಷಿಗೆ ಮುನ್ನ ಸಾಕಷ್ಟು ಬಾರಿ ಹಲವಾರು ನಿಟ್ಟಿನಲ್ಲಿ ನಾವು ಯೋಚನೆ ಮಾಡಬೇಕಾಗಿದೆ. ಮಳೆಕಾಡುಗಳ ಉಪಯೋಗ ಅಷ್ಟಿಷ್ಟಲ್ಲ. ಈಗೀಗ ಹಲವಾರು ರೋಗಾಣುಗಳು ಪ್ರತ್ಯಕ್ಷಗೊಂಡು, ರೂಪಾಂತರಗೊಂಡು ಮನುಕುಲಕ್ಕೆ ಕಂಟಕವಾಗುತ್ತಿರುವಾಗ ನಾಶವಾಗುತ್ತಿರುವ ನೈಸರ್ಗಿಕ ಕಾಡುಮೇಡುಗಳಲ್ಲಿ ಅಂತಹ ರೋಗಾಣುಗಳಿಗೆ ಚಿಕಿತ್ಸೆಯಿದೆ. ಆದರೆ ಸ್ವತಃ ಸಂಜೀವಿನಿಯೇ ಅಲ್ಲಿದ್ದರೂ ಕೂಡ ಮೂಲವನ್ನು ಪತ್ತೆ ಮಾಡುವುದರೊಳಗೆ ನಾಶವಾಗುತ್ತಿರುವುದು ದುರಂತ.